ಸಾಕ್ಷಿಯನ್ನು ದಿನಾಂಕಃ **17-06 -2025** ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃಶ್ರೀ ಆರ್.ಎಸ್.ಹೆಚ್ ಆರೋಪಿ ಪರ ವಕೀಲರಿಂದಃ**

ನಾನು ಪಿರ್ಯಾದಿ ಸೊಸೈಟಿಯಲ್ಲಿ ಸುಮಾರು 10 ವರ್ಷಗಳಿಂದ ಮ್ಯಾನೇಜರಾಗಿ ಕಾರ್ಯನಿರ್ವಹಿಸುತ್ತಿದ್ದೇನೆ. ಆರೋಪಿಯು 2017 ನೇ ಸಾಲಿನಲ್ಲಿ ತನಗೆ ರೂ. 5,50,000/-ಲಕ್ಷ ಸಾಲ ನೀಡಬೇಕೆಂದು ಅರ್ಜಿಯನ್ನು ಸಲ್ಲಿಸಿದ್ದನು. ನಾನು 3 ಬಾರಿ ನನ್ನ ಮುಖ್ಯ ವಿಚಾರಣೆಯನ್ನು ಸಲ್ಲಿಸಿದ್ದು, ದಿನಾಂಕ ನನಗೆ ನೆನಪಿರುವುದಿಲ್ಲ. 3 ಬಾರಿ ನಾನೇ ಮುಖ್ಯ ವಿಚಾರಣೆಯನ್ನು ಸಲ್ಲಿಸಿರುತ್ತೇನೆಯೇ ಅಥವಾ ಬೇರೆ ಬೇರೆ ಮ್ಯಾನೇಜರ ಸಲ್ಲಿಸಿರುತ್ತಾರಾ ಎಂದರೆ , ಸಾಕ್ಷಿಯು ಮೊದಲು ಬಾರಿಗೆ ಅನಿಲ್ ಎಸ್ ಡಿಸೋಜಾ ಎನ್ನುವವರು ತಮ್ಮ ಮುಖ್ಯ ವಿಚಾರಣೆಯನ್ನು ಸಲ್ಲಿಸಿದ್ದರು. 2 ನೇ ಬಾರಿಗೆ ಮುಖ್ಯ ವಿಚಾರಣೆಯನ್ನು ಯಾರು ಸಲ್ಲಿಸಿದರು ಎಂದರೆ , ನನಗೆ ವರ್ಗಾವಣೆ ಆದ ನಂತರ ಮತ್ತು ನಾನು ಚಾರ್ಜ ತೆಗೆದುಕೊಂಡ ನಂತರ ಮುಖ್ಯ ವಿಚಾರಣೆಯನ್ನು ಸಲ್ಲಿಸಿರುತ್ತೇನೆ ಎಂದು ನುಡಿಯುತ್ತಾರೆ. 2023 ನೇ ಇಸ್ವಿಯಲ್ಲಿ ನನ್ನ ವರ್ಗಾವಣೆಯಾಗಿರುತ್ತದೆ. ಈ ಪ್ರಕರಣವನ್ನು ಮುಂದುವರೆಸಲು ಮುಖ್ಯ ಕಚೇರಿಯಿಂದ ಅಧಿಕಾರ ಪತ್ರ ಬಂದಿರುತ್ತದೆ. ಈ ಹಿಂದಿನ ಮ್ಯಾನೇಜರ್ ಮೇ-2023 ರಂದು ವರ್ಗಾವಣೆಗೂಂಡಿರುತ್ತಾರೆ.

ಒಟ್ಟು ಎಷ್ಟು ದಾಖಲೆಗಳನ್ನು ನಾನು ಹಾಜರುಪಡಿಸಿದ್ದೇನೆ ಎಂದು ನೋಡಿ ಹೇಳಬೇಕಾಗುತ್ತದೆ. ಈ ಹಿಂದಿನವರು ಈ ಪ್ರಕರಣದಲ್ಲಿ ಯಾವ ದಾಖಲಾತಿಗಳನ್ನು ಹಾಜರುಪಡಿಸಿದ್ದಾರೆ, ಮತ್ತು ನಾನು ಯಾವ ದಾಖಲಾತಿಗಳನ್ನು ಹಾಜರುಪಡಿಸಿದ್ದೇನೆ ಎಂದು ನೋಡಿದರೆ ಹೇಳಬಹುದು ಎಂದರೆ ಸರಿ. ಈ ಹಿಂದಿನವರು ಮತ್ತು ನಾನು ಸಲ್ಲಿ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ನೋಡಿದರೆ ಮಾತ್ರ ನನಗೆ ವಿಷಯಗಳು ತಿಳಿಯುತ್ತವೆ ಎಂದರೆ ಸರಿ. ಹೀಗಾಗಿ ನನಗೆ ಈ ಪ್ರಕರಣದ ಬಗ್ಗೆ ಸಂಪೂರ್ಣವಾದ ಮಾಹಿತಿ ಇರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ತಾವು ಹಾಜರುಪಡಿಸಿದ ದಾಖಲೆಗಳನ್ನು ತೋರಿಸಿ ಕೇಳಲಾಗಿ ಅವುಗಳಲ್ಲಿ ತಮಗೆ ಮುಖ್ಯ ಕಚೇರಿಯಿಂದ ಬಂದ ಅಧಿಕಾರ ಪತ್ರವಿದೆಯೇ ಎಂದರೆ , ಸಾಕ್ಷಿಯು ನಿಪಿ.7 ನ್ನು ತೋರಿಸಿರುತ್ತಾರೆ.

ಯಾವ ದಿನಾಂಕದಂದು ಈ ಪ್ರಕರಣವನ್ನು ಮುಂದುವರೆಸಿಕೊಂಡು ಹೋಗಲು ನನಗೆ ಅಧಿಕಾರ ಪತ್ರವನ್ನು ಕೊಟ್ಟರು ಎಂದರೆ , ಸಾಕ್ಷಿಯು ನೋಡಿ ಹೇಳಬೇಕಾಗುತ್ತದೆ ಎಂದು ನುಡಿಯುತ್ತಾರೆ. ಯಾವ ದಿನಾಂಕದಂದು ನನಗೆ ಅಧಿಕಾರ ಪತ್ರವನ್ನು ಕೊಟ್ಟರು ಎಂದು ನಿಖರವಾಗಿ ಹೇಳಲು ಬರುವುದಿಲ್ಲ ಎಂದರೆ , ಸಾಕ್ಷಿಯು ಮೇ ತಿಂಗಳಿನಲ್ಲಿ ಎಂದು ನುಡಿಯುತ್ತಾರೆ .

ಆರೋಪಿಯಿಂದ ಒಟ್ಟು ಎಷ್ಟು ಚೆಕ್ ಗಳನ್ನು ಪಡೆದುಕೊಂಡಿದ್ದೀರಿ ಎಂದರೆ , ಸಾಕ್ಷಿಯು ಯಾವುದು ಇಲ್ಲವೆಂದು ನುಡಿಯುತ್ತಾರೆ. ಸಾಲವನ್ನು ಕೊಡುವ ಕಾಲಕ್ಕೆ ಯಾವ ಯಾವ ದಾಖಲಾತಿಗಳನ್ನು ಪಡೆದುಕೊಂಡಿದ್ದೇವು ಎಂದರೆ, ಆಧಾರ ಕಾರ್ಡ, ಫೋಟೋ, ಹೈಪೋಥಿಕೇಷನ್ ಅಗ್ರಿಮೆಂಟ್, ಮತ್ತು ಪ್ರಾಮಿಸರಿ ನೋಟಗಳನ್ನು ಪಡೆದುಕೊಂಡಿದ್ದೇವು ಎಂದು ಸಾಕ್ಷಿ ನುಡಿಯುತ್ತಾರೆ. ಆರೋಪಿಗೆ ಯಾವ ದಿನಾಂಕದಂದು ನೋಟಿಸ್ಸ ಜಾರಿ ಮಾಡಲಾಗಿರುತ್ತದೆ ಎಂದರೆ , ನೋಡಿ ಹೇಳಬೇಕಾಗುತ್ತದೆ. ನಾನು ಆರೋಪಿಯ ಸಹಿಗಳನ್ನು ಗುರುತಿಸಬಹುದು. ನಿಪಿ.4 ನ್ನು ನಾನೇ ಹಾಜರು ಮಾಡಿರುತ್ತೇನೆ ಎಂದರೆ ಇಲ್ಲ, ಅಂದರೆ ನಾವು ಆರೋಪಿಗೆ ಯಾವುದೇ ನೋಟಿಸ್ಸ ಕೊಟ್ಟಿರುವುದಿಲ್ಲವೆಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯವಕಾಶ ಕೇಳಿದ್ದು ಸಮಯವಕಾಶ ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರ ದ ನ್ಯಾದಂ ಮುಂಡಗೋಡ.